
## ಕಳೆದ ಸಂಚಿಕೆಯಲ್ಲಿ

ಸುಗಂಧಾ ಅಮ್ಮ ಬಂದು ರಿತಿಕ್ ಜೊತೆ ಮದುವೆಯಾಗು ಎಂದು ಹೇಳಿದಾಗ ಸುಗಂಧಾ ತಾನು ಸ್ವತಂತ್ರವಾಗಿ ಇರುವ ಬಗ್ಗೆ ಹಾಗೂ ರಿತಿಕ್ ಅಪ್ಪ ಬಂದು ಇದೇ ವಿಚಾರ ಮಾತನಾಡಿರುವುದಾಗಿ ತಿಳಿಸುತ್ತಾಳೆ. ಅಲ್ಲದೆ ಅಮ್ಮ ಕೂಡ ಅಪ್ಪನಿಂದ ಪ್ರತ್ಯೇಕವಾಗಿ ಇದ್ದು, ಬೇರೆ ಒಬ್ಬರೊಂದಿಗೆ ಇರಲು ಬಯಸಿದ್ದು, ಅಪ್ಪನ ಜೊತೆಗೆ ವಿಚ್ಛೇದನ ಪಡೆಯಲಾಗದೆ 'ಸಾಮಾಜಿಕ ಪ್ರತ್ಯೇಕತೆ'ಯನ್ನು ನ್ಯಾಯಾಲಯದಿಂದ ಪಡೆದಿರುವುದನ್ನು ನೆನಪಿಸುತ್ತಾಳೆ. ಮನೆಯೊಡತಿ ಬಂದು ರಿತಿಕ್ ಜೊತೆ ಮದುವೆಯಾಗಿ, ಅಕ್ಕಪಕ್ಕದ ಮನೆಯವರು ಪಿಸುಪಿಸು ಮಾತನಾಡುತ್ತಿರುವುದಾಗಿ ಹೇಳುತ್ತಾಳೆ. ಬೇರೆ ಮನೆ ಹುಡುಕುವುದಾಗಿ ಮನೆಯೊಡತಿಗೆ ತಿಳಿಸುತ್ತಾಳೆ ಸುಗಂಧಾ. ಈಗಿನ ಕಾಲದ ಹುಡುಗಿಯರು ಎಷ್ಟು ಬೋಲ್ಡ್ ಆಗಿರುತ್ತಾರೆ ಎಂಬುದಕ್ಕೆ ಸುಗಂಧಾ ಬೆಂಗಳೂರಿಗೆ ರೈಲಿನಲ್ಲಿ ಪ್ರಯಾಣ ಮಾಡುವಾಗ ಜೊತೆಯಾಗಿದ್ದ ಮೂವರು ಹುಡುಗಿಯರ ಜೀವನಶೈಲಿಯೇ ಸಾಕ್ಷಿ ಎಂಬುದನ್ನು ಮನದಟ್ಟು ಮಾಡುತ್ತಾಳೆ. ಈ ಮನೆಯಲ್ಲೂ ಬೇರೆಯವರ ಗುಸುಗುಸು ಮಾತು ಕೇಳಿಬಂದಾಗ ಮತ್ತೆ ಮನೆ ಬದಲಾಯಿಸುತ್ತಾರೆ.



ರಿತಿಕ್‌ನನ್ನು ವಿವಾಹವಾಗಿರಲಿಲ್ಲ. ಅದು ಅಲ್ಲಿಗೇ ಮುಗಿಯಲಿಲ್ಲ. ನಾವು ಅಮೃತಶಿಲೆಯಿಂದಾದ ಸಾಮಗ್ರಿಗಳನ್ನು ಕೊಳ್ಳುತ್ತಿರುವಾಗ ಪ್ರೇರಣಾ ಒಂದು ಸಣ್ಣ ಡಬ್ಬಿಯನ್ನು ಎತ್ತಿಕೊಂಡಳು. ಸೂಕ್ಷ್ಮ ಕೆತ್ತನೆಯ ಆ ಡಬ್ಬಿ ತುಂಬಾ ಸುಂದರವಾಗಿತ್ತು. ಅವಳು ಆ ಡಬ್ಬಿಯನ್ನು ಖರೀದಿಸಿದಳು.

'ನನಗೂ ಒಂದು ಕೊಡು' ನಾನು ಮುಗುಳ್ನಗುತ್ತಾ ಹೇಳಿದೆ.

'ಸುಗಂಧಾ, ಇದು ಕುಂಕುಮದ ಡಬ್ಬಿ, ನಿನಗೆ ಉಪಯೋಗವಾಗಲ್ಲ', ಪ್ರೇರಣಾ ಉದ್ಧಟತನದಿಂದ ಹೇಳಿದ್ದಳು.

'ನಾನಿದನ್ನು ಡ್ರಾಯಿಂಗ್ ರೂಮಿನಲ್ಲಿಡುತ್ತೇನೆ, ಸುಂದರವಾಗಿದೆಯಲ್ಲ?' ನಾನೂ ಸುಮ್ಮನಿರದಾದೆ. ನನಗೆ ಅವಳ ವರ್ತನೆ ಇಷ್ಟವಾಗಲಿಲ್ಲ. ಆದರೆ ನನಗೆ ಕೆಡುಕೆನಿಸಿತು ಎಂಬುದನ್ನು ಅವಳಿಗೆ ತಿಳಿಯಪಡಿಸಲು ನಾನು ಬಯಸುತ್ತಿರಲಿಲ್ಲ.

'ಮತ್ತೊಂದು ಕೊಡಪ್ಪಾ!' ನಾನು ಅಂಗಡಿಯವನಿಗೆ ಹೇಳಿದಾಗ, ಪ್ರೇರಣಾ ನನ್ನನ್ನು ವಿಚಿತ್ರವಾಗಿ ನೋಡಿದಳು.

'ತಗೊಳ್ಳಿ', ನನಗೆ ನನ್ನ ಬೈತಲೆಯಲ್ಲಿ ಕುಂಕುಮ ಹಚ್ಚಿಕೊಳ್ಳುವ ಹಕ್ಕು ಇದೆಯೋ ಇಲ್ಲವೋ ಎಂಬ ಬಗ್ಗೆ ಅಂಗಡಿಯವನಿಗೆ ತಿಳಿಯುವ ಆಸಕ್ತಿ ಇರಲಿಲ್ಲ. ನಾನು ಎರಡು ಡಬ್ಬಿಗಳನ್ನು ಪ್ಯಾಕ್ ಮಾಡಿಸಿಕೊಂಡೆ. ಆದರೆ ನಾನೆಂದೂ ಅವುಗಳನ್ನು ಡ್ರಾಯಿಂಗ್ ರೂಮಿನಲ್ಲಿಡಲಿಲ್ಲ. ಹೀಗಾಗಿ ರಿತಿಕ್‌ಗೆ ಈ ಬಗ್ಗೆ ತಿಳಿಯಲಿಲ್ಲ.

'ಏನು ಕೊಂಡೆ?' ರಿತಿಕ್ ನನ್ನನ್ನು ಕೇಳಿದ್ದ.

'ಈ ಅಮೃತಶಿಲೆಯ ಮಾಲೆ ಮತ್ತು ಅಮೃತಶಿಲೆಯ ಕಿವಿಯ ಟಾಪ್ಸ್' ನಾನು ಮಾಲೆ ಮತ್ತು ಟಾಪ್ಸ್ ಬಗ್ಗೆ ಮಾತ್ರ ಹೇಳಿದ್ದೆ. ಆ ಕುಂಕುಮದ ಡಬ್ಬಿಗಳು ಕೆಲವು ದಿನ ನನ್ನ ಹ್ಯಾಂಡ್‌ಬ್ಯಾಗಿನಲ್ಲಿಯೇ ಇದ್ದವು. ಕಡೆಗೆ ಅದೊಂದು ದಿನ ಅವುಗಳನ್ನು ಒಬ್ಬ ಭಿಕ್ಷುಕಿಗೆ ಕೊಟ್ಟೆ. ಅವುಗಳನ್ನು ಮಾರಿ ಅವಳು ದುಡ್ಡು ತೆಗೆದುಕೊಳ್ಳಲಿ ಎಂಬುದು ನನ್ನ ಉದ್ದೇಶವಾಗಿತ್ತು. 'ಸದಾ ಸುಖಿಯಾಗಿರು' ಎಂದು ಆ ಭಿಕ್ಷುಕಿ ನನಗೆ ಆಶೀರ್ವದಿಸಿದ್ದಳು. ಆ ಭಿಕ್ಷುಕಿ, 'ಸದಾ ಸೌಭಾಗ್ಯವತಿಯಾಗಿರು' ಅಥವಾ 'ಐಶ್ವರ್ಯವಂತೆಯಾಗು' ಎಂದು ಹೇಳಲು ಹೇಗೆ ಸಾಧ್ಯ? ನಾನು ಅವಿವಾಹಿತೆಯೋ ಅಥವಾ ವಿಧವೆಯೋ ಎಂದು ಅವಳಿಗೆಲ್ಲಿ ತಿಳಿದಿತ್ತು? ಪರಂಪರೆಗಳು ಎಲ್ಲರನ್ನೂ ಕೆಟ್ಟದ್ದಾಗಿ ಹಿಡಿದಿರುತ್ತದೆ, ಭಿಕ್ಷುಕಿಗೂ ಹಿಡಿದಿತ್ತು.

ಅದೊಂದು ದಿನ ಪತ್ರಿಕೆಯಲ್ಲಿ ಹರಿಯಾಣಾದ ಒಂದು ಹಳ್ಳಿಯಲ್ಲಿ 'ಆನರ್ ಕಿಲಿಂಗ್' ಬಗ್ಗೆ ಸುದ್ದಿಯನ್ನು ಓದಿದೆ. ರಿತಿಕ್ ಸಹ ಓದಿದ 'ಇದು ನೀಚತನದ ಪರಮಾವಧಿ! ಅತ್ಯಂತ ಅಮಾನವೀಯ ಘಟನೆ' ರಿತಿಕ್ ಬಡಬಡಿಸಿದ.

'ಇಂಥ ಸುದ್ದಿಗಳನ್ನು ಓದಿದಾಗ, ನಾವು ಯಾವ ಯುಗದಲ್ಲಿ ಬದುಕುತ್ತಿದ್ದೇವೆ? ಎಂಬ ಯೋಚನೆ ಬರುತ್ತದೆ. ನಮ್ಮ ದೇಶ ಇಪ್ಪತ್ತೊಂದನೆಯ ಶತಮಾನಕ್ಕೆ ತಲುಪಿದೆ ಎಂದು ಯಾರು ಹೇಳುತ್ತಾರೆ?' ಎಂದು ನಾನು ಸಹ ಹೇಳಿದ್ದೆ. ಆ ಸುದ್ದಿಯನ್ನು ಓದಿ ನಾನು ವಿಚಲಿತಳಾಗಿದ್ದೆ. ಇದು ನಾಲ್ಕು ತಿಂಗಳ ಒಳಗೆ ಘಟಿಸಿದ್ದ ಐದನೆಯ ಸುದ್ದಿಯಾಗಿತ್ತು. ಪ್ರದೇಶ ಮತ್ತು ಸ್ಥಳದ ಬದಲಾವಣೆಯಿಂದ ಘಟನೆಯ ರೂಪ ಬದಲಾಗುತ್ತಿರಲಿಲ್ಲ. ಇಬ್ಬರು ಯುವಕರಿಗೆ ಪ್ರೀತಿ ಮಾಡಿದ ಅಪರಾಧಕ್ಕೆ ಗಲ್ಲು ಶಿಕ್ಷೆಯನ್ನು ವಿಧಿಸಲಾಗಿತ್ತು.

'ನಾವು ರಾಧಾಕೃಷ್ಣರನ್ನು ಪೂಜಿಸುತ್ತೇವೆ; ಆದರೆ ಪ್ರೀತಿಯನ್ನೇ ಅಪರಾಧವೆಂದು ತಿಳಿಯುತ್ತೇವೆ. ಎಷ್ಟೊಂದು ಕಂಟ್ರಾಸ್ಟ್ ಅಲ್ವಾ' ಎಂದಿದ್ದೆ.

'ಕಂಟ್ರಾಸ್ಟ್ ತುಂಬಾ ಇದೆ, ನಾವು ಅನೇಕ ವಿರೋಧಾಭಾಸಗಳಲ್ಲಿ ಬದುಕುತ್ತೇವೆ. ನಾವು ಶಿವಲಿಂಗವನ್ನು ಪೂಜಿಸುತ್ತೇವೆ, ಶಿವನನ್ನು ಸೃಷ್ಟಿಕರ್ತನ ರೂಪದಲ್ಲಿ ಕುಟುಂಬ ಸಮೇತ ಪೂಜಿಸುತ್ತೇವೆ. ಆದರೆ ಶಾಲೆಗಳಲ್ಲಿ ಲೈಂಗಿಕ ಶಿಕ್ಷಣವನ್ನು ಕೊಡುವ ಪ್ರಸ್ತಾವ ಬಂದಾಗ, ಸಂಸ್ಕೃತಿಗೆ ಸಂಕಟ ಎಂದು ಹೇಳುತ್ತೇವೆ', ರಿತಿಕ್ ದೊಡ್ಡ ಮಾತನ್ನು ಹೇಳಿದ್ದ.

'ಎಚ್ಚರವಿರಲಿ! ಕಾವಿಧಾರಿಯೊಬ್ಬನ ಕಿವಿಗೆ ನಿನ್ನ ಮಾತು ಬಿದ್ದೀತು', ನಾನು ನಕ್ಕಿದ್ದೆ.

'ಹೌದು, ಧರ್ಮ ಸಹ ರಾಜಕೀಯದ ಸೇವಕ, ಗುಲಾಮ', ರಿತಿಕ್‌ನ ಧ್ವನಿಯಲ್ಲಿ ಖಿನ್ನತೆಯಿತ್ತು. ಅದೆಷ್ಟೋ ದಿನಗಳ ನಂತರ ರಿತಿಕ್‌ನ ವಿಚಾರಗಳಲ್ಲಿ ಸಮಾಜ, ಧರ್ಮ ಮತ್ತು ರಾಜಕೀಯದ ಬಗ್ಗೆ ಆಕ್ರಮಣದ ಛಾಯೆ ಕಾಣಬಂದಿತ್ತು. ಇಂಥ ಆಕ್ರಮಣಗಾರಿಕೆ ನನಗಿಷ್ಟವಾಗಿದೆ. ಇದೇ ನನ್ನನ್ನು ರಿತಿಕ್‌ನೆಡೆಗೆ ಆಕರ್ಷಿಸಿತ್ತು.

'ಸದ್ಯ, ನಮ್ಮ ಮನೆಯವರಿಗೆ ಆನರ್‌ಕಿಲಿಂಗ್ ಬಗ್ಗೆ ವಿಶ್ವಾಸವಿಲ್ಲ', ನಾನು ವಾತಾವರಣವನ್ನು ಸಾಮಾನ್ಯಗೊಳಿಸಲು ನಕ್ಕು ಹೇಳಿದೆ.

'ಈ ಶಬ್ದವನ್ನು ಮೀಡಿಯಾ ಗ್ಲೋರಿಫೈ ಮಾಡುತ್ತಿದೆ. ಯಾರನ್ನೇ ಕೊಲ್ಲುವುದು ಗೌರವದ ವಿಷಯವಾಗಲು ಸಾಧ್ಯವೇ ಇಲ್ಲ. 'ಗೆಸ್ಟಾಪೋ ಕಿಲಿಂಗ್' ಅಥವಾ ನೀಚ ಹತ್ಯೆ, ಮಾನಸಿಕ ವಿಕೃತಿಯಿಂದಾದ ಕೊಲೆ ಎಂದು ಮೀಡಿಯಾದವರು ಬರೆಯಬೇಕು. ನಮ್ಮ ಸಮಾಜ ಸಹ ಸ್ವತಃ ದೋಷವನ್ನು ಹುಟ್ಟಿಸುತ್ತದೆ, ಮುಖಂಡರೊಬ್ಬರು ವಿಧಾನಸಭೆ ಅಥವಾ ಸಂಸತ್‌ನಲ್ಲಿ ಬಿಲ್ ತರಲಿ, ಆ ದೋಷದ ವಿರುದ್ಧ ಕಾನೂನು ಮಾಡಲಿ ಎಂದು ರಾಜಕೀಯದೆಡೆಗೆ ನೋಡುತ್ತದೆ. ನಂತರ ಕೆಲವರು ಆ ಕಾನೂನನ್ನು ಮುರಿಯುವ ರೋಮಾಂಚನವನ್ನು ಪಡೆಯಲು ಬಯಸುತ್ತಾರೆ', ರಿತಿಕ್ ಉದ್ರೇಕಕ್ಕೆ ಒಳಗಾಗುತ್ತಿದ್ದ. ಅವನ ಧ್ವನಿ ನಮ್ಮ ಕೋಣೆಯ ಗೋಡೆಗಳನ್ನು ದಾಟಿ ಪಕ್ಕದ ಮನೆಯ ಕೋಣೆಯನ್ನು ತಲುಪುವುದರಲ್ಲಿತ್ತು. ಅವರೆಲ್ಲಾ ಏನು ಯೋಚಿಸಿದರೋ? ನಾನು ಗಾಬರಿಯಾದೆ.

'ಈಗ ಬೇಗ ರೆಡಿಯಾಗು, ಇಲ್ಲದಿದ್ದರೆ ಕಚೇರಿಗೆ ಹೋಗುವುದು ತಡವಾಗುತ್ತದೆ. ಇವತ್ತು ನನಗೆ ತುಂಬಾ ಕೆಲಸವಿದೆ, ನಾನು ಗೋಡೆಯ ಗಡಿಯಾರವನ್ನು ನೋಡುತ್ತಾ ರಿತಿಕ್‌ಗೆ ಹೇಳಿದೆ. ರಿತಿಕ್ ಸಹ ತನ್ನ ಭಾವನಾಜಗತ್ತಿನಿಂದ ಹೊರ ಬಂದ. ಅಂದು ಕಚೇರಿಗೆ ಹೋಗುವವರೆಗೆ ನಮ್ಮ ನಡುವೆ ಯಾವುದೇ ಮಾತುಕತೆ ನಡೆಯಲಿಲ್ಲ. 'ಆನರ್ ಕಿಲಿಂಗ್' ಸುದ್ದಿ ನಮ್ಮ ನಡುವೆ ಹೆಡೆಯೆತ್ತಿ ಕೂತಿತ್ತು. ನಾವು 'ಮ್ಯಾರೇಜ್ ಆನಿವರ್ಸರಿ'ಯನ್ನು ಆಚರಿಸುತ್ತಿರಲಿಲ್ಲ. ಆದರೆ ನಾವು ನಮ್ಮ 'ಗೃಹ ಪ್ರವೇಶದ ಆನಿವರ್ಸರಿ'ಯನ್ನು ಆಚರಿಸುತ್ತಿದ್ದೆವು. ನಾವು ಜೊತೆಯಲ್ಲಿರುತ್ತಾ ಐದು ವರ್ಷಗಳು ಸಂದಿದ್ದವು; ಮನೆ ತೆಗೆದುಕೊಂಡು ಮೂರು ವರ್ಷಗಳಾಗಿದ್ದವು. (ಸಶೇಷ)